# ಸಾಮ್ರಾಜ್ಯದಲ್ಲಿ ಕರಕುಶಲತೆ

## 1. ಹೃದಯ




### ಸಾಮಗ್ರಿಗಳು

- ಕರ್ಲಿ ರಿಬ್ಬನ್, 50 cm
- ಪೇಪರ್ ಹೃದಯ
- ಸತ್ಯವೇದ ವಾಕ್ಯವಿರುವ ಬ್ಯಾನರ್
- ಗ್ಲೂ
- ಬಣ್ಣಗಳು

### ಸೂಚನೆಗಳು

1. ಹೃದಯ ಮತ್ತು ಬಾವುಟವನ್ನು ಕತ್ತರಿಸಿರಿ. ನಿಮ್ಮ ಮೆಚ್ಚಿನ ಬಣ್ಣವನ್ನು ಅವುಗಳಿಗೆ ಹಚ್ಚಿರಿ.
2. ನೇತಾಡುವಂತೆ ಮಾಡುವ ಸಲುವಾಗಿ ಹೃದಯದ ಹಿಂಭಾಗಕ್ಕೆ ರಿಬ್ಬನ್ ನ ಎರಡೂ ಮೂಲೆಗಳನ್ನು ಗ್ಲೂನಿಂದ ಅಂಟಿಸಿರಿ, ರಿಬ್ಬನ್ ಮಧ್ಯದಲ್ಲಿ ಬಾವುಟನ್ನು ಅಂಟಿಸಿರಿ.

## 2. ಕುಲುಮೆ



### ಸಾಮಗ್ರಿಗಳು

- ಪೇಪರ್ ಕುಲುಮೆಯ ರೂಪ
- ಪೇಪರ್ ಕುಲುಮೆಯ ಆಕಾರಗಳು
- ಬಣ್ಣಗಳು
- ಗ್ಲೂ

### ಸೂಚನೆಗಳು

1. ಬೆಂಕಿಯ ಕುಲುಮೆ ಮತ್ತು ಬೆಂಕಿಯನ್ನು ಕತ್ತರಿಸಿರಿ. ಕುಲುಮೆಯ ಮಧ್ಯಭಾಗದಲ್ಲಿರುವ ಬೆಂಕಿ ಮತ್ತು ಜನರಿಗೆ ಬಣ್ಣ ಹಚ್ಚಿರಿ (ಅದರೊಳಗಿದ್ದವರಿಗೆ ಯಾವುದೇ ತೊಂದರೆಯಾಗಿರಲಿಲ್ಲ ಎಂಬದನ್ನು ಮರೆಯಬೇಡಿರಿ).
2. ಬೆಂಕಿಯ ಆಕಾರಗಳಿಗೆ ಆರೆಂಜ್, ಹಳದಿ ಮತ್ತು ಕೆಂಪು ಬಣ್ಣಗಳನ್ನು ಹಚ್ಚಿರಿ ಆಗ ಅದು ನಿಜವಾದ ಬೆಂಕಿಯಂತೆ ಕಾಣಿಸುವದು.
3. ಬೆಂಕಿಯ ಚೂರುಗಳ ಅಂಚುಗಳನ್ನು ಮಡಚಿರಿ ಮತ್ತು ಅವುಗಳನ್ನು ಕುಲುಮೆಗೆ ಅಂಟಿಸ್ರಿ ಆಗ ಅವರು ಅವುಗಳನ್ನು ಬಾಗಲಿನ ಹಾಗೆ ತೆರೆಯಲು ಸಾಧ್ಯವಾಗುತ್ತದೆ.

# ೩. ಬಾಬೆಲಿನ ಟೋಪಿ

## ಸಾಮಗ್ರಿಗಳು



- ಪೇಪರ್ ಮಾದರಿ
- ಬಣ್ಣಗಳು
- ಗ್ಲೂ
- ಕರ್ಲಿ ರಿಬ್ಬನ್, 50cm

## ಸೂಚನೆಗಳು

1. ಟೋಪಿಯ ಮಾದರಿಯನ್ನು ಕತ್ತರಿಸಿರಿ. ಅದಕ್ಕೆ ಬಣ್ಣ ಹಚ್ಚಿರಿ.
2. ಚುಕ್ಕೆಗಳಿರುವ ಸಾಲುಗಳಿಗನುಸಾರ ಟೋಪಿಯನ್ನು ಮಡಚಿದರೆ ಅದು ಮೂರು ಪ್ರತ್ಯೇಕ ಭಾಗದಂತೆ ಕಾಣಿಸುವದು.
3. ಕುತ್ತಿಗೆಗೆ ಕಟ್ಟುವ ಸಲುವಾಗಿ ಟೋಪಿಯ ಎರಡೂ ಕಡೆಗಳಲ್ಲಿ ಕರ್ಲಿ ರಿಬ್ಬನ್ ಕಟ್ಟಿರಿ.
4. ಗ್ಲಿಟ್ಟರ್ ನಿಂದ ಅಲಂಕಾರ ಮಾಡಿರಿ.

# 4. ಪಿಕ್ಚರ್ ಫ್ರೇಮ್

## ಸಾಮಗ್ರಿಗಳು



- ಕಲರ್ ಪೇಪರ್ ನಿಂದ ಫ್ರೇಮ್ ಮಾದರಿ
- 3 ಪೇಪರ್ ಕಿರೀಟಗಳು
- "ನಾನು ಧೈರ್ಯಶಾಲಿ" ಪದಗಳು
- ½ ಕುಡಿಯುವ ಸ್ಟ್ರಾ
- ಕರ್ಲಿ ರಿಬ್ಬನ್
- ಗ್ಲೂ

## ಸೂಚನೆಗಳು

1. ಮಾದರಿ ವಿಧಾನವನ್ನು ಕತ್ತರಿಸಿರಿ ಮತ್ತು ಹೆಚ್ಚುವರಿ ಚೂರುಗಳನ್ನು ತೆಗೆದುಹಾಕಿರಿ.
2. ಮಧ್ಯಭಾಗಕ್ಕೆ ಮಡಚಿರಿ ಮತ್ತು 4 ಮೂಲೆಗಳಲ್ಲಿ 3 ಮೂಲೆಗಳಿಗೆ ಗ್ಲೂ ಹಾಕಿರಿ. ಚಿತ್ರವನ್ನು ಹಾಕುವ ಸಲುವಾಗಿ 4 ನೇ ಮೂಲೆಯನ್ನು ತೆರೆದಿಡಿ ಮತ್ತು ಸ್ಟ್ರಾ ಇಡುವ ಸಲುವಾಗಿ ಮೇಲ್ಭಾಗದ ಬ್ಯಾಂಡ್ ಗಳನ್ನು ತೆರೆದಿಡಿರಿ.
3. ಫೋಟೋ ಪ್ರಿಂಟ್ ಮಾಡುವ ಬಗ್ಗೆ ಯೋಚಿಸಿರಿ ಅಥವಾ ಮಕ್ಕಳಿಂದಲೇ ಎಸ್ತೇರಳ ಚಿತ್ರವನ್ನು ಬರೆಸಿ ಫ್ರೇಮ್ ನೊಳಗೆ ಹಾಕಿರಿ.
4. ಕಿರೀಟಗಳು ಮತ್ತು "ನಾನು ಧೈರ್ಯಶಾಲಿ" ಎಂಬ ಪದಗಳನ್ನು ಅಲಂಕರಿಸಿರಿ.
5. ಮುಗಿಸುವಾಗ, ಮೇಲ್ಭಾಗದಲ್ಲಿರುವ ಬ್ಯಾಂಡ್ ಗಳೊಳಗೆ ಸ್ಟ್ರಾ ಇಡಿರಿ ಮತ್ತು ಪಿಕ್ಚರ್ ಫ್ರೇಮ್ ತಗಲುಹಾಕಲು ಸ್ಟ್ರಾದ ಎರಡೂ ಕಡೆಗಳಿಗೆ ಕರ್ಲಿ ರಿಬ್ಬನ್ ಕಟ್ಟಿರಿ.

# 5. ಲಯನ್ ಮಾಸ್ಕ್ (ಸಿಂಹದ ಮುಖವಾಡ)

## ಸಾಮಗ್ರಿಗಳು



- ಪೇಪರ್ ಮಾಸ್ಕ್ ಮಾದರಿ
- ಮುಖದ ರೂಪವಿರುವ ಹಳದಿ ಪೇಪರ್
- ಕಿವಿ, ಹುಬ್ಬು ಮತ್ತು ಮೂಗಿನ ರೂಪವಿರುವ ಆರೆಂಜ್ ಪೇಪರ್
- ಮುಖದ ರೂಪವಿರುವ ಬಿಳಿ ಪೇಪರ್
- ಕರ್ಲಿ ರಿಬ್ಬನ್, 50cm
- ಬಣ್ಣಗಳು
- ಗ್ಲೂ

## ಸೂಚನೆಗಳು

1. ಮುಖ ಚಿತ್ರದ ಮಾದರಿಯನ್ನು ಕತ್ತರಿಸಿರಿ ಮತ್ತು ಅದಕ್ಕೆ ಬಣ್ಣ ಹಚ್ಚಿರಿ.
2. ಮೇಲೆ ಚಿತ್ರದಲ್ಲಿ ಇರುವ ಹಾಗೆಯೇ ಹಳದಿ ಪೇಪರ್ ಮೇಲ್ಭಾಗದಲ್ಲಿ ಅಂಟಿಸಿರಿ.
3. ಅದರ ಮೇಲೆ ಮುಖ ಮತ್ತು ಮೂಗಿನ ಚಿತ್ರಣವನ್ನು ಅಂಟಿಸಿರಿ. ಹಾಗೆಯೇ ಫೋಟೋದಲ್ಲಿ ಇರುವ ಹಾಗೆ ಕಿವಿಗಳು ಮತ್ತು ಹುಬ್ಬುಗಳನ್ನು ಅಂಟಿಸಿರಿ.
4. ಎರಡೂ ಕಡೆಗಳಲ್ಲಿ ಕರ್ಲಿ ರಿಬ್ಬನ್ ಕಟ್ಟಿರಿ, ಮಗುವಿನ ತಲೆಗೆ ಕಟ್ಟಲು ಅನುಕೂಲವಾಗಿರಬೇಕು.